O.S 38/2008
PW-1

O.S 38/2008
PW-1

**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 01-02-2019.**

*ಪಾಟೀ ಸವಾಲು ಶ್ರೀ ಸಿ.ಎಸ್.ಡಿ ವಕೀಲರಿಂದ*

ಜವರಶೆಟ್ಟಿರವರು **30** ಸೈಟುಗಳನ್ನು ಎಷ್ಟೆಷ್ಟು ಅಡಿಗಳಿಗೆ ಮಾಡಿದ್ದರು ಎಂದು ಗೊತ್ತಿಲ್ಲ.ಅದರೆ ನನ್ನ ಸೈಟಿನ ವಿಸ್ತೀರ್ಣ ಪೂ-ಪ **60** ಅಡಿ.ಉ-ದ-**43*33/2.**ನಗರ ಯೋಜನಾ ಪ್ರಾಧಿಕಾರದಿಂದ ನಕ್ಷೆ ನಮೂದನೆ ಆಗಿತ್ತು. ಸದರಿ ನಕ್ಷೆಯನ್ನು ನಾಯಾಲಯಕ್ಕೆ ಹಾಜುರಪಡಿಸಿದ್ದೇನೆ.ಸದರಿ ನಕ್ಷೆಯು **1999** ರಲ್ಲಿ ಆಗಿರುತ್ತದೆ.ಸದರಿ **30** ಸೈಟುಗಳಲ್ಲಿ ಎಷ್ಟು ರಸ್ತೆಗಳಿತ್ತು ಎಂದರೆ **3** ರಸ್ತೆಗಳಿತ್ತು ಎಂದು ನುಡಿಯುತ್ತಾರೆ. ಸದರಿ ರಸ್ತೆಗಳ ಪೈಕಿ ನನ್ನ ನಿವೇಶದ ಮುಂದೆ ಇರುವ ರಸ್ತೆ ತಲಾ **30** ಅಡಿ ಹಾಗೂ ಉಳಿದ ಎರಡೂ ರಸ್ತೆಗಳು ತಲಾ **20** ಅಡಿ ಅಳತೆ ಇರುತ್ತದೆ.ಸದರಿ **3** ರಸ್ತೆಗಳು ಉತ್ತರ-ದಕ್ಷಿಣವಾಗಿರುತ್ತವೆ.

ಜವರಶೆಟ್ಟಿಗೆ ಪುರಸಭೆಯಲ್ಲಿ ಮೊದಲ ಬಾರಿಗೆ ವಿಸ್ತೀರ್ಣ ಪೂ-ಪ **60** ಅಡಿ.ಉ-ದ-**43*33/2** ಖಾತೆ ಆಗಿತ್ತು.ನಾನು ಕ್ರಯಕ್ಕೆ ಪಡೆಯುವ ಮೊದಲು ಪುರಸಭೆಯಲ್ಲಿ ನನ್ನ ಕ್ರಯದಾರರಿಗೆ ಕೇವಲ **30*40** ಅಡಿಯ ನಿವೇಶದ ಮಾತ್ರ ಖಾತೆಯಾಗಿತ್ತು ಎಂದರೆ ಸರಿಯಲ್ಲನಂತರ ನಾನು ಮತ್ತು ಜವರಶೆಟ್ಟಿ ಸೇರಿಕೊಂಡು ಮೇಲ್ಕಂಡ ಅಳತೆಯನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನಾನು ಮನೆಯನ್ನು **1999** ರಲ್ಲಿ ಕಟ್ಟಿರುತ್ತೇನೆ.ನನ್ನ ಬಳಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನೀಡಿರುವ ನಕ್ಷೆಯ ಅನುಮೋದನೆ ಹಾಗೂ ಪುರಸಭೆಯ ಅನುಮತಿ ಪತ್ರ ಇದೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.ನನ್ನ ಮನೆಯ ಪೂ-ಪ ದಿಕ್ಕಿಗೆ ಕಂಪೌಂಡನ್ನು ಹಾಕಿಕೊಂಡಿದ್ದೇನೆ.ಉತ್ತರಕ್ಕೆ ನಾನು ಮತ್ತು ಶಿವಸ್ವಾಮಿರವರು ಸೇರಿ ಹಾಕಿಕೊಂಡಿರುವ ಕಂಪೌಂಡು ಇದೆ.ಸದರಿ ಕಂಪೌಂಡನ್ನು ಇಬ್ಬರ ಖರ್ಚಿನಿಂದ, ಇಬ್ಬರ ಜಗದಲ್ಲೂ ನಿರ್ಮಿಸಿಕೊಂಡಿದ್ದೇವೆ.ಸದರಿ ಕಂಪೌಂಡ ಅರ್ಧ ಅಡಿ ಅಳತೆ ಇದೆ.

ನನ್ನ ಮನೆಯ ಪಶ್ಚಿಮ ಭಾಗದ ಗೋಡೆಯಿಂದ ಉತ್ತರದ ಕಡೆ ಇರುವ ಕಂಪೌಂಡಗ್ ಅಂತರ ಸುಮಾರು 2 ಅಡಿ ಇದೆ. ಪೂರ್ವ ಭಾಗದಲ್ಲೂ ಸಹ 2 ಅಡಿ ಅಂತರವಿದೆ.

ನನ್ನ ಮನೆಯ ಮಹಡಿಗೆ ಹೋಗುವ ಸಲುವಾಗಿ ಪೂರ್ವ ದಿಕ್ಕಿನಲ್ಲಿ ಉತ್ತರದ ಕಡೆಗೆ ಮೆಟ್ಟಿಲುಗಳನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿ.ಸದರಿ ಮೆಟ್ಟುಲುಗಳ ಅಳತೆ 2 ಅಡಿ ಇದೆ.ನಮ್ಮ ಮನೆಯ ದಕ್ಷಿಣ ಭಾಗದಲ್ಲಿ ಉಳಿಕೆ ಜಾಗ ಪೂ-ಪ 60 ಅಡಿ,ಉ-ದ-13 ಅಡಿ ಇದೆ.ನನ್ನ ಪಶ್ಚಿಮ ದಕ್ಕಿನ ಮನೆಯ ಗೋಡೆ 27 1/2 ಅಡಿ ಇದೆ.ಪೂರ್ವ ದಿಕ್ಕಿನಲ್ಲಿ ನನ್ನ ಮನೆಯ ವಿಸ್ತೀರ್ಣ ಅಡಿ 27 1/2 ಅಡಿ ಇದೆ.ನನ್ನ ಮನೆಯ ಪೂರ್ವ ಭಾಗಕ್ಕೆ ಪೂ-ಪಶ್ಚಿಮ 15 ಅಡಿ ಖಾಲಿ ಜಾಗ ಇದೆ.ನನ್ನ ಪೂರ್ವ ದಿಕ್ಕಿನ ಗೋಡೆಯಿಂದ ಕಂಪೌಂಡ್ ವರೆಗೆ 10 ಅಡಿ ಖಾಲಿ ಜಾಗ ಇದೆ.ನನ್ನ ಮನೆಯ ಉತ್ತರ ದಿಕ್ಕಿನಲ್ಲಿ ಪೂ-ಪಶ್ಚಿಮವಾಗಿ 4 ಅಡಿಯನ್ನು ಮಾತ್ರ ಬಿಟಗೊಂಡಿದ್ದೇನೆ ಎಂದರೆ ಸರಿಯಲ್ಲ

ನಾನು ಮನೆಯ ಕಟ್ಟುವ ಕಾಲಕ್ಕೆ ಸಾರ್ವಜನಿಕರು ನನ್ನ ವಿರುದ್ಧ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟುತ್ತಿದ್ದರು ಎಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ.ಸದರಿ ದಾವೆಯಲ್ಲಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಬಾರದೆಂದು ಆದೇಶ ಆಗಿತ್ತು ಎಂದರೆ ಸರಿಯಲ್ಲ.ಸದರಿ ಆದೇಶದ ಮೇರೆಗೆ ನಾನು ನನ್ನ ಮನೆಯನ್ನು ರಸ್ತೆ ಬಿಟ್ಟು ನನ್ನ ಜಾಗದಲ್ಲಿ ನಾನು ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿಯಲ್ಲ.ಆ ಕಾರಣದಿಂದ ನಾನು ದಕ್ಷಿಣ ದಿಕ್ಕಿನಲ್ಲಿ ಕಂಪೌಂಡ್ ಆಗಿಲ್ಲ ಎಂದರೆ ಸರಿಯಲ್ಲ.ನಂತರ ಮೇಲ್ಕಂಡ ಸಾರ್ವಜನಿಕ ಹಿತಾಸಕ್ತಿ ದಾವೆ ಸಂದಾನದ ಮೂಲಕ ವಜಾ ಆಗಿದೆ ಎಂದರೆ ಸರಿಯಲ್ಲ.ನನ್ನ ದುಂಡವರ್ತನೆಯನ್ನು ಪುನರ್ ವರ್ತಿಸಿ ರಸ್ತೆಯನ್ನು ಹೊಡೆದುಕೊಳ್ಳುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮನೆಯ ದಕ್ಷಿಣ ದಿಕ್ಕಿನಲ್ಲಿ ಸಾರ್ವಜನಿಕರು ಓಡಾಡುವ ರಸ್ತೆ ಇದೆ ಎಂದರೆ ಸರಿಯಲ್ಲ.ಸದರಿ ಜವರಶೆಟ್ಟರವರು ನನ್ನ ನಿವೇಶನದ ಪಶ್ಚಿಮ ದಿಕ್ಕಿಗೆ ಸಿ.ಕೆ ಬಾಬು ಎಂಬುವವರಿಗೆ 1 ನಿವೇಶನ ಮಾರಾಟ ಮಾಡಿದ್ದಾರೆ ಎಂದರೆ ಸರಿ.ಸದರಿ ಸಿ.ಕೆ ಬಾಬು ರವರು ಹೆಚ್.ವಿ ರವೀಶ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.ರವೀಶ್ ರವರ ಸ್ವತ್ತಿನ ದಕ್ಷಿಣಕ್ಕೆ ಏನು ಇದೆ ಎಂದು ಗೊತ್ತಿಲ್ಲ.ಸದರಿ ರವೀಶ್ ರವರು ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ.

O.S 38/2008
PW-1

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತುಃ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

***(ಎಸ್.ಚಿನ್ನಸ್ವಾಮಿ)***

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಚನ್ನರಾಯಪಟ್ಟಣ**